ಬಸ್‌ಗಳ ಸಂಚಾರವಿಲ್ಲ, ಇಂಥಾ ಸಂದರ್ಭದಲ್ಲಿ ಸಂದರ್ಶನಕ್ಕೆ ಕರೆದರೆ ಆ ಮಕ್ಕಳ ಗತಿ ಏನಾಗಬೇಕು ?

Mr. Speaker — I have also brought it to the notice of the Hon'ble Chief Minister. Let us wait for some time. He is also try to get the information.

ಶ್ರೀ ಕೆ. ಹೆಚ್. ರಂಗನಾಥ್.—ಲಂಚದ ವಿಷಯವಾಗಿ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳವರು ಹೇಳಿದರು.....

ಅಧ್ಯಕ್ಷರು. — ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ಅದರಲ್ಲಿ ಎಲ್ಲಾ ವಿಷಯುವನ್ನೂ ಸಹ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಮತ್ತೆ ಮಾನ್ಯ ಸದಸ್ಯರು ಲಂಚದ ವಿಷಯವನ್ನು ಪ್ರಸ್ತಾಪ ಮಾಡಿ ಹೇಳುತ್ತಿಲ್ಲ. ಅವರು ಕೇಳುತ್ತಿರತಕ್ಕ ಪ್ರಶ್ನೆಯೇ ಬೇರೆಯಾಗಿದೆ. There is a limit for all these things.

(ಗೊಂದಲ)

ಶ್ರೀ ಎಂ. ಮಹದೇವ್.— ಎಲ್ಲಾ ವಿಷಯಗಳಿಗೂ ಮಾನ್ಯ ಮುಖ್ಯ ಮಂತ್ರಿಗಳವರು ಉತ್ತರ ಕೊಟ್ಟಿರುವಾಗ...

ಅಧ್ಯಕ್ಷರು. ಅವರು ಕೇಳಿರತಕ್ಕ ಪ್ರಶ್ನೆ ಏನೆಂದರೆ, ರೈತರ ಚಳುವಳಿ ನಡೆಯುತ್ತಿದೆ, ಆದುದರಿಂದ ಇಂಟರ್‌ವ್ಯೂವನ್ನು ಮುಂದಕ್ಕೆ ಹಾಕಿ ಎಂದು ಕೇಳುತ್ತಿದ್ದಾರೆ. ವಿಷಯ ಬಹಳ ಪ್ರಾಮುಖ್ಯವಾದುದರಿಂದಲೇ ನಾನು ಅಲೋ ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರು ವಿಷಯವನ್ನು ಸಂಗ್ರಹಣೆ ಮಾಡಿಕೊಳ್ಳಬೇಕೋ ? ಬೇಡವೋ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ರಸ್ತೆ, ಮತ್ತು ರೈಲು ರೋಕೋ ಚಳುವಳಿ ನಡೆಯುತ್ತಿರುವುದರಿಂದ ಇಂಟರ್‌ವ್ಯೂ ಕರೆದಿರುವುದರಿಂದ ಅಭ್ಯರ್ಥಿಗಳಿಗೆ ಹೋಗುವುದಕ್ಕೆ ಅನಾನುಕೂಲವಾಗುತ್ತದೆ, ಆದುದರಿಂದ.....

Mr. Speaker.— Immediately you cannot force the Governament to give reply. Please give some time.

ಶ್ರೀ ಎಂ. ವೀರಪ್ಪ ಮೊಯ್ಲಿ.—ರಸ್ತೆ ಮತ್ತು ರೈಲು ರೋಕೋ ಚಳುವಳಿ ನಡೆಯುತ್ತಿರುವುದರಿಂದ ಅಭ್ಯರ್ಥಿಗಳು ಇಂಟರ್‌ವ್ಯೂಗೆ ಹೋಗಲು ತೊಂದರೆಯಾಗಿದೆ, ಆದುದರಿಂದ ಅದನ್ನು ಮುಂದಕ್ಕೆ ಹಾಕಿ ಎಂದು ಎಲ್ಲರೂ ಕೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ .— ಆ ರೀತಿಯಾಗಿ ನಿಜವಾಗಿಯೂ ತೊಂದರೆಯಾಗಿದ್ದರೆ, ಅದನ್ನು ಯಾವ ರೀತಿಯಾಗಿ ನಿವಾರಿಸಬಹುದು ಎನ್ನುವ ಬಗ್ಗೆ ಯೋಚನೆ ಮಾಡುತ್ತೇವೆ ಮತ್ತು ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಶ್ರೀ ನಾಣಯ್ಯನವರಿಂದ....

4. ನಿಯಮ 334ರ ಮೇರೆಗೆ

(i) ವಿಷಯ : ಕೊಡಗಿನ ಮಾಕೊಡ್ಲು ವಿನಲ್ಲಿ ಮರಗಳನ್ನು ಅನಧಿಕೃತವಾಗಿ ಕಡಿಯುವ ಬಗ್ಗೆ.

ಶ್ರೀ ಎಂ. ಎಂ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಮುಕೊಡ್ಲು ಮೆಫತಾಲು ಗ್ರಾಮದ ಸ. ನಂ. 30:5 ಮತ್ತು 53:1 ಈ ಸರ್ವೆ ನಂಬರ್ ನಲ್ಲಿರತಕ್ಕ ಮರಗಳನ್ನು ಅನಧಿಕೃತವಾಗಿ ಕಡಿಯಲಾಗಿದೆ ಎನ್ನುವ ಬಗ್ಗೆ ಅಲ್ಲಿನ ಸಾರ್ವಜನಿಕರು ಅರಣ್ಯ ಸಚಿವರಿಗೂ ಮತ್ತು ಮುಖ್ಯ ಮಂತ್ರಿಗಳವರಿಗೂ ದೂರನ್ನು ಕೊಟ್ಟಿರುತ್ತಾರೆ. ಅಲ್ಲಿ ಈಗ ಲಾ ಅಂಡ್ ಆರ್ಡರ್‌ನ ಪರಿಸ್ಥಿತಿ ಹದೆ ಗೆಟ್ಟಿರುವುದರಿಂದ ಇದರ ಬಗ್ಗೆ ಮಾನ್ಯ ಅರಣ್ಯ ಖಾತೆಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ ಜೀವಿಜಯ (ಅರಣ್ಯ ಇಲಾಖೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಮುಕೊಡ್ಲು ಮೆಫತಾಲು ಗ್ರಾಮದ ಸ. ನಂ. 30:5 ಮತ್ತು 53:1ಕ್ಕೆ ಶ್ರೀ ಡಿ. ಡಿ. ರಾಮಯ್ಯ ಎಂಬ ವಕೀಲರು ಕೊರ್ಟಿನ ಅಧಿಕೃತ ನಿರ್ವಹಣೆದಾರರು ಇರುತ್ತಾರೆ. ಈ ಸ. ನಂ.ಗಳಲ್ಲಿ ಅನಧಿಕೃತವಾಗಿ ಮರ ಕಡಿಯಲ್ಪಟ್ಟಿವೆ ಎಂಬ ಬಗ್ಗೆ ಶ್ರೀ ಎ. ಪಿ. ಕುಶಾಲಪ್ಪ, ಅಜಂತಾ ಬಿಡಿ ಭಾಗ ಮಾರಾಟಗಾರರು ಇವರು ಅರಣ್ಯ ಸಂಚಾರಿ ದಳದ ಸಹಾಯಕ ಅರಣ್ಯ ಅಧಿಕಾರಿ ಮತ್ತು ಸರ್ಕಾರದ ವಿಶೇಷ ಕಾರ್ಯದರ್ಶಿ ಇವರಲ್ಲಿ ಅರ್ಜಿ ಸಲ್ಲಿಸಿದ್ದರು. ಇದರ ಬಗ್ಗೆ ವಿಚಾರಣೆ ನಡೆಸಲಾಗಿ ಶ್ರೀ ಡಿ. ಡಿ. ರಾಮಯ್ಯನವರು ಮೆಫತಾಲ ಗ್ರಾಮದ ವದಂಥ ಭೀಮಯ್ಯ ಇವರ ಮನೆಯಲ್ಲಿ ದಾಸ್ತಾನು ಇಟ್ಟಿದ್ದರೆಂದು ಹೇಳಲಾದ 0.549 ಘ. ಮೀಟರ್ ಮರ ದೊರೆತಿದೆ. ಈ ಅಕ್ರಮ ದಾಸ್ತಾನಿನ ಬಗ್ಗೆ ಇವರನ್ನು ವಿಚಾರಿಸಲು ಯಾವುದೇ ಅಧಿಕೃತ ದಾಖಲಾತಿಯನ್ನು ಅವರು ಹಾಜರ್ಪಡಿಸದೇ ಇದ್ದ ಕಾರಣ ಅವರ ವಿರುದ್ಧ

ಮೊಕದ್ದಮೆ ಹೂಡಲಾಗಿದೆ (ಮೊಕದ್ದಮೆ ಸಂಖ್ಯೆ 9: 83–84) ಈ ಮೊಕದ್ದಮೆ ಇನ್ನೂ ತನಿಖೆ ಹಂತದಲ್ಲಿರುತ್ತದೆ.

ಖಚಿತ ವರ್ತಮಾನದ ಮೇರೆಗೆ ಮೇಲಿನ ಸರ್ವೆ ನಂಬರ್ ಇರುವ ಪ್ರದೇಶದಲ್ಲಿ ಕೊಯ್ದ ಮರಗಳೆಂದು ಹೇಳಾದ ಮರಗಳನ್ನು ಸಾಗಿಸುತ್ತಿದ್ದ ಕೆಲವು ವಾಹನಗಳನ್ನು ಅರಣ್ಯ ಮತ್ತು ಪೋಲೀಸ್ ಅಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ವಾಹನಗಳ ಸಂಖ್ಯೆ ಈ ರೀತಿ ಇವೆ—:

1) ಎಂ. ವೈ. ಎಂ. 6445 ವ್ಯಾನು 2) ಎಂ. ವೈ. ಎಕ್ಸ್. 6863 ಜೀಪು
3) ಎಂ. ವೈ. ಎಂ. 5452 ವ್ಯಾನ್ 4) ಎಂ. ವೈ. ಸಿ. 90 ವ್ಯಾನು.

ಈ ವಿಷಯದಲ್ಲೂ ಕೂಡ ಇನ್ನೂ ತನಿಖೆ ನಡೆಯುತ್ತಿದೆ.

ಶ್ರೀ ಡಿ. ಡಿ. ರಾಮಯ್ಯ ಇವರು 30:5 ಮತ್ತು 53:1 ಸ. ನಂ. ಗಳಿಂದ ಮರಗಳನ್ನು ಸಾಗಿಸುತ್ತಿದ್ದರೆಂಬ ವಿಚಾರವಾಗಿ ಅರಣ್ಯ ಸಂಚಾರಿ ದಳದವರು ಕೂಲಂಕುಷವಾಗಿ ಸ್ಥಳ ತಪಾಸಣೆ ಮಾಡಿರುತ್ತಾರೆ. ಆದರೆ ಸದರಿ ಸ. ನಂ. ಗಳಿಂದ ಯಾವುದೇ ಮರ ಕಡಿದು ಸಾಗಿಸಲ್ಪಟ್ಟಿರುವುದಿಲ್ಲ. ಆದರೆ ಈ ಸ. ನಂ. ಗಳ ಪಕ್ಕದ ಸ. ನಂ. ಗಳಲ್ಲಿ ಮದಲಾಂಡ ಕುಟುಂಬಕ್ಕೆ ಸೇರಿದವರು ಅಕ್ರಮವಾಗಿ ಮರ ಕಡಿದಿರುವುದು ಗಮನಕ್ಕೆ ಬಂದಿದೆ. ಇದರ ಬಗ್ಗೆ ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

1) ಮುಕ್ಕೋಡ್ಲು ಮೇಘತಾಲು ಗ್ರಾಮದ ಸ.ನಂ : 30:5 ಮತ್ತು 53:1 ಜಮೀನನ್ನು ಮಾದಾಲಂಡದ ದಿವಂಗತ ಶ್ರೀ ಬೆಳ್ಳಿಯಪ್ಪ ಮತ್ತು ಅವರ ತಮ್ಮಂದಿರಾದ ಶ್ರೀ ಎ.ಪಿ. ಕುಶಾಲಪ್ಪ ಮತ್ತು ಇತರ 7 ಜನ 1960ರಲ್ಲಿ ಏಲಕ್ಕಿ ಬೇಸಾಯಕ್ಕೋಸ್ಕರ ಗೇಣಿಗೆ ಪಡೆದುಕೊಂಡಿದ್ದರು.

2) 1977 ರಲ್ಲಿ ಈ 8 ಜನ ಪಾಲುಗಾರರಲ್ಲಿ ವ್ಯಾಜ್ಯ ಉದ್ಭವಿಸಿ, ಸದರಿ ಜಮೀನಿನ ಬಗ್ಗೆ ಈ 8 ಜನ ಪಾಲುಗಾರರು ಭೂ ನ್ಯಾಯಾಧಿಕರಣದ ಮುಂದೆ ಘೋಷಣಾ ಪತ್ರವನ್ನು ಸಲ್ಲಿಸಿದ್ದರು.

3) ಭೂ ನ್ಯಾಯಾಧಿಕರಣವು ಅಂತಿಮ ತೀರ್ಮಾನವನ್ನು ಕಾದಿರಿಸಿ 1977ರಲ್ಲಿ ಮಡಕೇರಿಯ ಶ್ರೀ ಎಂ.ಎಂ. ಮಾಚಯ್ಯ ಎಂಬ ಅಡ್ವೋಕೇಟನ್ನು ಸದರಿ ಭೂಮಿಗೆ ರಿಸೀವರ್ ಆಗಿ ನೇಮಿಸಿತು. 1981ರಲ್ಲಿ ಶ್ರೀ ಮಾಚಯ್ಯನವರನ್ನು ತೆಗೆದು ಅವರ ಸ್ಥಾನದಲ್ಲಿ ಶ್ರೀ ಡಿ. ಡಿ. ರಾಮಯ್ಯನವರನ್ನು ಭೂ ನ್ಯಾಯಾಧಿಕರಣವು ರಿಸೀವರ್ ಆಗಿ ನೇಮಿಸಿತು. ಈಗ ಈ ಭೂಮಿಗೆ ಸಂಬಂಧಿಸಿದಂತೆ ಇಡೀ ಪ್ರಕರಣವು ರಾಜ್ಯದ ಹೈಕೋರ್ಟಿನಲ್ಲಿ ತೀರ್ಮಾನಕ್ಕೆ ಇದೆಯೆಂದು ಹೇಳಲಾಗಿದೆ.

4) ಶ್ರೀ ಎ.ಪಿ. ಕುಶಾಲಪ್ಪನವರು 1983ರ ಮಾರ್ಚಿ ತಿಂಗಳಿಂದೀಚೆಗೆ ಸದರಿ ಭೂಮಿಗಳ ರಿಸೀವರ್ ಆಗಿ ನೇಮಿಸಲ್ಪಟ್ಟಿರುವ ಶ್ರೀ ಡಿ.ಡಿ. ರಾಮಯ್ಯನವರು ಅಕ್ರಮವಾಗಿ 50 ಲಾರಿಯಷ್ಟು ನಂದಿ ತುಂಡುಗಳನ್ನು ಸದರಿ ಭೂಮಿಗಳಿಂದ ಕಡಿದು ಸಾಗಿಸಿ ಮುಕ್ಕೋಡ್ಲು ಗ್ರಾಮದ ವಡ್ಡಂಡ ಭೀಮಯ್ಯ ಎಂಬುವವರ ಮನೆಯಲ್ಲಿ ಇಟ್ಟಿದ್ದಾರೆಂದು ಮಡಿಕೇರಿಯ ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಕೋರಿ ದೂರಿತ್ತಿದ್ದರು.

5) ಶ್ರೀ ಎ.ಪಿ. ಕುಶಾಲಪ್ಪನವರ ದೂರಿನ ಬಗ್ಗೆ ವಿಚಾರಣೆ ನಡೆಸಿ ನೋಡಲಾಗಿ ಸರ್ವೆ ನಂಬರ್ 30:5 ಮತ್ತು 53:1 ಭೂಮಿಗಳಲ್ಲಿ ಯಾವುದೇ ರೀತಿಯ ಅಕ್ರಮವಾಗಿ ಮರ ಕಡಿಯಲ್ಪಟ್ಟಿಲ್ಲವೆಂದು ತಿಳಿದು ಬಂದಿದೆ. ಆದರೆ ಈ ಸರ್ವೆ ನಂ. ಭೂಮಿ ಇರುವ ಪಕ್ಕದ ಸರ್ವೆ ನಂಬರ್‌ಗಳು, ಅಂದರೆ ಭೂ ನ್ಯಾಯಮಂಡಳಿ ಮುಂದಿರತಕ್ಕಂತಹ ಜಾಗದಲ್ಲಿ ಅಲ್ಲ, ಬೇರೆ ಜಾಗದಲ್ಲಿ ಅಕ್ರಮವಾಗಿ ಮರಗಳನ್ನು ಕಡಿದಿರುವುದು ಕಂಡು ಬಂದಿದೆ. ಈ ಸಂಬಂಧದಲ್ಲಿ ಕೆಲವು ವಾಹನಗಳನ್ನು ಪೋಲೀಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

6) ಶ್ರೀಯುತ ನಾಣಯ್ಯನವರು ಮುಕ್ಕೋಡ್ಲು ಮೆಘೆತಾಲು ಗ್ರಾಮದ ಸರ್ವೆ ನಂಬರ್ 30:5 ಮತ್ತು 51:3 ಭೂಮಿಗಳಲ್ಲಿ ಅಂದರೆ ಭೂ ನ್ಯಾಯಮಂಡಳಿ ಅಧಿಕೃತ ರಿಸೀವರನ್ನು ನೇಮಿಸಿರುವ ಭೂಮಿಗಳಲ್ಲಿ ಅಕ್ರಮ ಮರ ಕಡಿತ ಮತ್ತು ಸಾಗಾಣಿಕೆ ಆಗಿರುವುದಾಗಿ ತಿಳಿಸಿದ್ದಾರೆ. ಅಧಿಕೃತ ರಿಸೀವರನ್ನು ನೇಮಿಸಿರುವ ಸರ್ವೆ ನಂಬರುಗಳು 30:5 ಮತ್ತು 53:1 ಆಗಿದ್ದು, ತನಿಖೆ ಪ್ರಕಾರ ಈ ಸದರಿ ಸರ್ವೆ ನಂಬರ್‌ಗಳಲ್ಲಿ ಯಾವುದೇ ಅಕ್ರಮ ಮರ ಕಡಿತ ಆಗಿರುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

(ii) ಸಿದ್ಧಾಪುರದಲ್ಲಿ ಮುತ್ಯಾ ಎಂಬ ಹರಿಜನ ಕೌನ್ಸಿಲರ್ ಮೇಲೆ ಅತ್ಯಾಚಾರ.

ಶ್ರೀ ಆರ್.ವಿ ದೇಶಪಾಂಡೆ(ಹಳಿಯಾಳ).— ಮಾನ್ಯ ಅಧ್ಯಕ್ಷರೇ, ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿರುವಂತೆ, ಮುತ್ಯಾ ಹರಿಜನ್ ಎಂಬ ಮುನಿಸಿಪಲ್ ಕೌನ್ಸಿಲರ್ ಮೇಲೆ ಮಾಡಿದ ಅತ್ಯಾಚಾರ ಅನ್ಯಾಯ ಪತ್ರಿಕೆಯಲ್ಲಿ ಬಂದಿದೆ. ತಾರೀಖು 27-1-84ನೇ ದಿವಸ ಸಿದ್ಧಾಪುರ ಮುನಿಸಿಪಲ್ ಅಧ್ಯಕ್ಷರ ಚುನಾವಣೆ ಆಯಿತು. ಈ ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿ ಅಧ್ಯಕ್ಷರಾಗಿ ಆರಿಸಿ ಬಂದರು. ಆದ್ದರಿಂದ ಕ್ಯಾತಿರಂಗ ಪಕ್ಷದ ಅಲ್ಲಿನ ಮುಖಂಡರು, ಶ್ರೀ ಪರಶುರಾಮ್ ಕಾನಡೆ, ನಾಯಕ್ ಮತ್ತಿತರ ಕಾರ್ಯಕರ್ತರು, ಮುತ್ಯಾ ಹರಿಜನ ಜನತಾ ಪಕ್ಷದ ಅಭ್ಯರ್ಥಿಗೆ ಮತ ಕೊಟ್ಟಿರ